ಅಸಲ ದಾವಾ ನಂ–284/2017

Sheristedar, Civil Judge (Junior Divn) & JMFC, Court Hungund-587118

ಮಾ॥ ಅಪರ ದಿವಾಣಿ ನ್ಯಾಯಾಧೀಶರು ಹುನಗುಂದ ರವರ ನ್ಯಾಯಾಲಯದಲ್ಲಿ.

1) ಶ್ರೀ, ಸಂಗಪ್ಪ ತಂ.ಮಲ್ಲಪ್ಪ ನಾಗೂರ.

--------ವಾದಿ.

ವಿರುದ್ಧ

1) ಶ್ರೀ, ಬಸವರಾಜ ತಂ/ಮಹಾಂತಪ್ಪ ನರಿ

------ಪ್ರತಿವಾದಿ.

## ವ್ಯವಹಾರ ಪ್ರಕ್ರಿಯಾ ಸಂಹಿತೆ ಆದೇಶ 8 ನಿಯಮ 1. ರ ಅಡಿ ಕೈಫಿಯತ್ತ.

ಇದರಲ್ಲಿ ಪ್ರತಿವಾದಿಯು ವಾದಿಯ ಅಸಲರ್ಜಿಗೆ ಬರಕೊಂಡ ಕೈಫಿಯತ್‌ನ ವಿವರ.

1) ವಾದಿಯ ದಾವೆಯು ಪ್ರಮಾಣಿಕತನದ್ದು ಇರುವದಿಲ್ಲ. ಈ ಪ್ರತಿವಾದಿಯು ಪ್ರತ್ಯಕ್ಷವಾಗಿ ಒಪ್ಪಿಕೊಂಡಿದ್ದನ್ನು ಹೊರತುಪಡಿಸಿ ಮಿಕ್ಕದ್ದೆಲ್ಲವನ್ನು ಸಂಪೂರ್ಣವಾಗಿ ಇನ್ಕಾರ ಮಾಡುತ್ತಾನೆ.

2) ವಾದಿಯು ತನ್ನ ಅಸಲರ್ಜಿಯ ಪ್ಯಾರಾ 4 ರಲ್ಲಿ ಅನ್ನುವಂತೆ ರಕ್ಕಸಗಿ ಗ್ರಾಮ ಪಂಚಾಯತ ಆಸ್ತಿ ನಂ– 35 ಇದು ವಾದಿಯ ಮಾಲ್ಕಿ ಹಕ್ಕಿನ ಆಸ್ತಿ ಆಗಿತ್ತು ಅನ್ನುವದು, ಅದನ್ನು ಸರಕಾರದವರು ಆಶ್ರಯ ಯೋಜನೆಯ ಅಡಿಯಲ್ಲಿ ಅವನಿಗೆ ಹಕ್ಕು ಪತ್ರ ನಿಡಿದ್ದರು ಅನ್ನುವದು ಪ್ರತಿವಾದಿಗೆ ಏಲಿಕಡೆಗೆ ತಿಳಿದಿದ್ದು ಇರುತ್ತದೆ. ವಾದಿಯು ಸದರ ಆಸ್ತಿಯಲ್ಲಿ ತನ್ನ ಹೆಂಡತಿಯಾದ ಲಕ್ಷ್ಮೀಬಾಯಿ ಗಂ/ಸಂಗಪ್ಪ ನಾಗೂರ ಇವಳಿಗೆ ಅವಳ ಉಪಜೀವನದ ಸಲುವಾಗಿ ತನ್ನ ಹಕ್ಕನ್ನು ಅವಳ ಹೆಸರಿನಲ್ಲಿ ಬಿಟ್ಟುಕೊಟ್ಟಿದ್ದು ಆ ಪ್ರಕಾರ ಪಂಚಾಯತ ಆಸ್ತಿ ರಜಿಸ್ಟರದಲ್ಲಿ ದಾಖಲ್ ಆಗಿದ್ದು, ಸದರ ಆಸ್ತಿಯಲ್ಲಿ ವಾದಿಯ ಹೆಂಡತಿ ಲಕ್ಷ್ಮೀಬಾಯಿ ಗಂ/ಸಂಗಪ್ಪ ನಾಗೂರ ಇವರು ಅರ್ಧ ಬಾಗದಲ್ಲಿ ಅಂದರೆ ದಕ್ಷಿಣಕ್ಕೆ 20*30 ಅಳತೆಯ ಮನೆಯನ್ನು ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ ಅಡವಿಟ್ಟು ಹಣ ಪಡೆದುಕೊಂಡು ಮನೆಯನ್ನು ಕಟ್ಟಿಸಿದ್ದು ಇರುತ್ತದೆ. ಸದರ ಆಸ್ತಿಯಲ್ಲಿ 35/1, ಹಾಗೂ 35/2, ಅಂತಾ ಭಾಗಗಳಾಗಿದ್ದು 35/1, ಭಾಗದಲ್ಲಿ ಮನೆ ಇದ್ದು ಇಂದಿಗೂ ಸದರ ಆಸ್ತಿಯು ವಾದಿಯ ಹೆಂಡತಿ ಲಕ್ಷ್ಮೀಬಾಯಿ ಗಂ/ಸಂಗಪ್ಪ ನಾಗೂರ ಇವರ ಹೆಸರಿನಲ್ಲಿ ಇರುತ್ತದೆ. ವಾದಿಯು ಸದರ ಪ್ಯಾರಾದಲ್ಲಿ ಮುಂದೆ ಅನ್ನುವಂತೆ ವಾದಿಯು ತನ್ನ ಉಪಜೀವನದ ಸಲುವಾಗಿ ಮಂಗಳೂರ ಕಡೆಗೆ ದುಡಿಯಲು ಹೊಗಿದ್ದನು ಅನ್ನುವದು ಹಾಗೂ ಈ ಪ್ರತಿವಾದಿಯ ಸಂಗಡ 24,000/– ರೂ ಗಳನ್ನು ಕೈಗಡ ತರೀಖ್ ಪಡೆದುಕೊಂಡಿದ್ದನು ಅನ್ನುವದು ಸರಿಅಲ್ಲಾ.

3) ವಾದಿಯ ಹೆಂಡತಿ ಲಕ್ಷ್ಮೀಬಾಯಿ ಇವರು ತನ್ನ ಆಸ್ತಿಯಲ್ಲಿ ಉತ್ತರದ ಕಡೆಗೆ ಉಳಿದ ಬೈಲು ಜಾಗೆಯನ್ನು ತಾ॥20–01–2010 ರಂದು ಈ ಪ್ರತಿವಾದಿಗೆ ಅಂದಿನ ಬಜಾರ ಬಾವದ ಕಿಮ್ಮತ್ತಿಗೆ ಅಂದರೆ ರೂ 24,000/– ರೂ ಗಳನ್ನು ಈ ಪ್ರತಿವಾದಿಯಿಂದ ಪಡೆದುಕೊಂಡು ತನ್ನ ಗ್ರಾಮ ಪಮಚಾಯತ ಆಸ್ತಿ ನಂ–35/2, ಪೂರ್ವ–ಪಶ್ಚಿಮ, 30 ಪುಟು, ಉತ್ತರ–ದಕ್ಷಿಣ, 18 ಪುಟು, ಆಸ್ತಿಯ ಖರೀದಿ ಪತ್ರವನ್ನು ಬರೆದುಕೊಟ್ಟು ಅಂದೆ ಸದರ ಆಸ್ತಿಯ ಕಬ್ಜಾವನ್ನು ಈ ಪ್ರತಿವಾದಿಗೆ ಒಪ್ಪಿಸಿದ್ದು ಇರುತ್ತದೆ. ಸದರ ಸಂಗತಿಯು ಈ ವಾದಿಗೆ ತಿಳಿದಿದ್ದು ಇರುತ್ತದೆ. ಇದಕ್ಕಿಂತಲೂ

No. of Corrections
Sheristedar, Civil Judge Junior Divn & JMFC, Court Hungund-587118

ಪೂರ್ವದಲ್ಲಿ ವಾದಿ ಹಾಗೂ ಅವನ ಹೆಂಡತಿ ಇರ್ವರೂ ಕೂಡಿ ತಾ॥12-05-2009 ರಂದು ಈ ಪ್ರತಿವಾದಿಗೆ ಖರೀದಿ ಸಂಚಗಾರ ಪತ್ರವನ್ನು ಬರೆದುಕೊಟ್ಟಿದ್ದು ಇರುತ್ತದೆ. ಸದರ ಆಸ್ತಿಯನ್ನು ಪ್ರತಿವಾದಿಗೆ ಖರಿದಿಗೆ ಕೊಟ್ಟ ವಿಷಯ ಹಾಗೂ ಸದರ ಆಸ್ತಿಯ ಕಬ್ಜಾ ಕೊಟ್ಟ ವಿಷಯ ಎಲ್ಲವೂ ವಾದಿಗೆ ತಿಳಿದಿದ್ದು ಇರುತ್ತದೆ. ಸದರ ಗ್ರಾಮ ಪಮಚಾಯತ ಆಸ್ತಿ ನಂ-35/2 ಇದನ್ನು ಖರೀದಿ ಹಿಡಿದ ಮೇಲೆ ಪಂಚಾಯತ ಅಸ್ತಿ ರಜಿಸ್ಟರದಲ್ಲಿ ದಾಖಲ್ ಆಗಿದ್ದು ಇರುತ್ತವೆ. ಆ ಪ್ರಕಾರ ಪಂಚಾಯತಿಯಲ್ಲಿ ತಾ॥11-01-2010 ರಂದು ಠರಾವು ಕೂಡಾ ಪಾಸಾಗಿ ಈ ಪ್ರತಿವಾದಿಯ ಹೆಸರು ಪಂಚಾಯತ ಆಸ್ತಿ ರಜೀಸ್ಟರದಲ್ಲಿ ದಾಖಲ್ ಆಗಿದ್ದು ಇರುತ್ತದೆ. ಮುಂದೆ ಈ ಪ್ರತಿವಾದಿಯು ವಿನ್ಯಾಸದ ನಕ್ಷೆಯನ್ನು ಹಾಜರ ಪಡಿಸಿ ಪಂಚಾಯತಿಯವರಿಂದ ಕಟ್ಟಡದ ಅಧಿಕೃತ ಪರವಾಣಿಗೆ ಪಡೆದುಕೊಂಡುತನ್ನ ಆಸ್ತಿಯಲ್ಲಿ ಕಟ್ಟಡ ಕಟ್ಟಲು ಪ್ರಾರಂಬ ಮಾಡಿದ ಮೇಲೆ ವಾದಿಯು ಈ ರೀತಿ ಸುಳ್ಳು ಮಜಕೂರಿನ ಈ ದಾವಾ ಮಾಡಿದ್ದು ಸರಿಅಲ್ಲಾ. ಈಗಾಗಲೆ ಈ ಪ್ರತಿವಾದಿಯು ಕಟ್ಟಡ ಕಟ್ಟಲು ಕಲ್ಲು, ಉಸಕು, ಹಾಗೂ ಸಿಮಿಂಟನ್ನು ಖರೀದಿಸಿ ಕಟ್ಟಡ ಪ್ರಾರಂಬ ಮಾಡುವ ವೇಳೆಯಲ್ಲಿ ಈ ರೀತಿ ಸುಳ್ಳು ಮಜಕೂರಿನ ಈ ದಾವಾ ಮಾಡಿದ್ದು ಇರುತ್ತದೆ.

4) ವಾದಿಯು ತನ್ನ ಅಸಲರ್ಜಿಯ ಪ್ಯಾರಾ 5 ರಲ್ಲಿ ಅನ್ನುವಂತೆ ತನ್ನ ಹೆಂಡತಿ ತನಗೆ ಪ್ರತಿವಾದಿಯು ಸದರ ಆಸ್ತಿಯಲ್ಲಿ ಕಟ್ಟಡ ಕಟ್ಟಹತ್ತಿರುತ್ತಾನೆ ಅಂತಾ ಹೆಳಿದ ಮೇಲೆ ತಾನು ಪ್ರತಿವಾದಿಯನ್ನು ಕೇಳಲು ಖರೀದಿ ವ್ಯಾವಹಾರದ ಬಗ್ಗೆ ತಿಳಿದು ಬಂತು ಅನ್ನುವದು ಸರಿಅಲ್ಲಾ. ವಾದಿಯ ಹೆಂಡತಿ ಹಾಗೂ ಊರ ಹಿರಿಯರ ಸಮಕ್ಷಮದಲ್ಲಿ ಖರೀದಿ ನೊಂದ್ ಮಾಡಿಕೊಟ್ಟು ಖರೀದಿ ಹಣ ತಗೆದುಕೊಂಡಿದ್ದು ಇರುತ್ತದೆ. ಸದರ ಸಂಗತಿಯು ವಾದಿಗೆ ತಿಳಿದ ವಿಷಯ ಇರುತ್ತದೆ. ವಾದಿಯು ಸದರ ಪ್ಯಾರಾದಲ್ಲಿ ಮುಂದೆ ಅನ್ನುವಂತೆ ತಾನು ಪ್ರತಿವಾದಿಯಿಂದ 24,000/- ರೂ ಗಳನ್ನು ಕೈಗಡ ಪಡೆದುಕೊಂಡಿದ್ದು ತಾನು ಮಂಗಳೂರಿನಲ್ಲಿ ಇರುವದರ ಗೈರ ಪಾಯಿದೆ ತಗೆದುಕೊಂಡು ಈ ರೀತಿ ಖೊಟ್ಟಿ ಖರೀದಿ ಕಾಗದವನ್ನು ರಚಿಸಿರುತ್ತಾರೆ ಅನ್ನುವದು ಸರಿಅಲ್ಲಾ. ವಾದಿಯು ಅನ್ನುವಂತೆ ಪ್ರತಿವಾದಿಯಿಂದ 24,000/- ರೂ ಗಳನ್ನು ಕೈಗಡ ಪಡೆದುಕೊಂಡಿದ್ದು ಅದನ್ನು ಪ್ರತಿವಾದಿಯು ಮರಳಿ ಕೇಳಿರುವದಿಲ್ಲಾ ಅನ್ನುವದು ಹಾಗೂ ವಾದಿಯ ಹೆಂಡತಿಯನ್ನು ಮೋಸತನದಿಂದ ಸಬ್ ರಜಿಸ್ಟರ ಕಛೇರಿಗೆ ಕರೆದುಕೊಂಡು ಹೋಗಿ ಖೊಟ್ಟಿ ಖರೀದಿ ಕಾಗದವನ್ನು ಪ್ರತಿವಾದಿಯು ಮಾಡಿಸಿಕೊಂಡಿರುತ್ತಾನೆ ಅನ್ನುವದು ಸದರ ಖರೀದಿ ಕಾಗದ ವಾದಿಯ ಮೇಲೆ ಬದ್ದವಿರುವದಿಲ್ಲಾ ಅನ್ನುವದು ಸರಿಅಲ್ಲಾ. ವಾದಿಯು ದುರುದ್ದೇಶದಿಂದ ಪ್ರತಿವಾದಿಯಿಂದ ದುರ್ಲಾಭ ಪಡೆದುಕೊಳ್ಳಬೇಕು ಅನ್ನುವ ದುರುದ್ದೇಶದಿಂದ ಈ ರೀತಿ ಖೊಟ್ಟಿ ದಾವಾ ಮಾಡಿದ್ದು ಇರುತ್ತದೆ.

5) ಸದರ ಆಸ್ತಿಗೆ ವಾದಿಯು ಮಾಲಕನಿಲ್ಲದೆ ಇದ್ದುದರಿಂದ ವಾದಿಗೆ ಈ ಪ್ರತಿವಾದಿಯ ಮೇಲೆ ಈ ದಾವಾ ಮಾಡಲು ಕಾನೂನಿನಿಂದ ಬರಲಾರದು.

6) ವಾದಿಯು ತನ್ನ ಹೆಂಡತಿ ಲಕ್ಷ್ಮೀಬಾಯಿ ಗಂ/ಸಂಗಪ್ಪ ನಾಗೂರ ಇವರನ್ನು ಸದರ ದಾವಾದಲ್ಲಿ ಪಾರ್ಟಿ ಮಾಡದೆ ವಾದಿಯ ಈ ದಾವೆಯು ಕಾನೂನಿನಿಂದ ನಡೆಯಲಾರದು.

of Corrections

7) ಗ್ರಾಮ ಪಂಚಾಯತ ಆಸ್ತಿ ನಂ-35/2 ಕ್ಕೆ ವಾದಿಯ ಹೆಂಡತಿ ಸಂಪೂರ್ಣ ಮಾಲಕಳಿರುತ್ತಾಳೆ ಅಂತಾ ಪ್ರತಿವಾದಿಯು ನಂಬಿ ಅಂದಿನ ಬಜಾರ ಬಾವದ ಕಿಮ್ಮತ್ತಿಗೆ ಹಿರಿಯರ ಸಮಕ್ಷಮದಲ್ಲಿ

ಖರೀದಿಗೆ ತಗೆದುಕೊಂಡು ಕಬ್ಜಾ ವಹಿವಾಟ ಉಪಭೋಗದಲ್ಲಿ ಇರುತ್ತಾ ಬಂದಿದ್ದು ಇದ್ದದುರಿಂದ ವಾದಿಗೆ ಈ ಪ್ರತಿವಾದಿಯ ಮೇಲೆ ಈ ದಾವಾ ಮಾಡಲು ಕಾನೂನಿನಿಂದ ಬರಲಾರದು.

8) ಪ್ರತಿವಾದಿಯು ದಾವಾದ ಆಸ್ತಿಯನ್ನು ತಾ॥20-01-2010 ರಂದು ಖರೀದಿಗೆ ತಗೆದುಕೊಂಡಿದ್ದು ಅಂದಿನಿಂದ ಇಂದಿನವರೆಗೂ ಸದರ ಆಸ್ತಿಯ ಕಬ್ಜಾ ವಹಿವಾಟ ಉಪಭೋಗದಲ್ಲಿ ಇದ್ದು, ಸದರ ಸಂಗತಿಯು ವಾದಿಗೆ ಹಾಗೂ ಅವನ ಹೆಂಡತಿಗೆ ತಿಳಿದ ವಿಷಯವಿದ್ದು ವಾದಿಯ ದಾವೆಯು ಮುದ್ದತಿ ಪ್ರತಿಬಂಧಕದ ಬಾದಕ ಬರುತ್ತಿದ್ದು ಆ ನಾತೆದಿಂದಲು ವಾದಿಯ ಈ ದಾವೆಯು ಕಾನೂನಿನಿಂದ ನಡೆಯಲಾರದು.

ಈ ಮೇಲಿನ ಎಲ್ಲಾ ಕಾರಣಗಳ ಮೂಲಕ ವಾದಿಯ ಈ ದಾವೆಯನ್ನು ಖರ್ಚು ಸಹಿತ ಕಿತ್ತಿ ಹಾಕಬೇಕು ಅಂತಾ ಬರಕೊಂಡ ಕೈಪಿಯತ್ತು ಸಹಿ, ತಾ॥26-02-2018.

ಪ್ರತಿವಾದಿಯ ಸಹಿ.

ಹುನಗುಂದ
ದಿನಾಂಕ:26-02-2018.

## ಸತ್ಯಾಪನೆ ಹೇಳಿಕೆ.

ಇದರಲ್ಲಿ ನಾನು ಶ್ರೀ ಬಸವರಾಜ ತಂ/ಮಹಾಂತಪ್ಪ ನರಿ ವಯಾ: 45 ವರ್ಷ ಉದ್ಯೋಗ: ಶೇತ್ಕಿ, ಸಾ॥ರಕ್ಕಸಗಿ. ತಾ॥ಹುನಗುಂದ, ಜಿ॥ಬಾಗಲಕೋಟ. ಇಂದು ಹುನಗುಂದದಲ್ಲಿ ಪ್ರಮಾಣ ಪೂರ್ವಕವಾಗಿ ಮಾಡುವ ಸತ್ಯಾಪನೆ ಹೇಳಿಕೆ ಏನಂದರೆ, ಸದರ ಕೈಪಿಯತ್ತನಲ್ಲಿರುವ ಮಾಹಿತಿಯನ್ನು ನಾನೆ ಹೇಳಿ ಬರೆಯಿಸಿದ್ದು ಅವುಗಳು ನಿಜವಿರುತ್ತವೆ.

ಹುನಗುಂದ.
ದಿನಾಂಕ:~~26-02-2018~~.
2.12.18

ಪ್ರತಿವಾದಿಯ ಸಹಿ.

ಪ್ರತಿವಾದಿಯ ಪರ ವಕೀಲರು.

Civil
JMFC.

ಅಸಲ ದಾವಾ ನಂ-284/2017

ಮೆ॥ ಅಪರ ದಿವಾಣಿ ನ್ಯಾಯಾಧೀಶರು ಹುನಗುಂದ ರವರ ನ್ಯಾಯಾಲಯದಲ್ಲಿ.

1) ಶ್ರೀ, ಸಂಗಪ್ಪ ತಂ.ಮಲ್ಲಪ್ಪ ನಾಗೂರ.

--------ವಾದಿ.

ವಿರುದ್ಧ

1) ಶ್ರೀ, ಬಸವರಾಜ ತಂ/ಮಹಾಂತಪ್ಪ ನರಿ

------ಪ್ರತಿವಾದಿ.

**ಪ್ರಮಾಣ ಪತ್ರ.**

ಇದರಲ್ಲಿ ನಾನು ಶ್ರೀ ಬಸವರಾಜ ತಂ/ಮಹಾಂತಪ್ಪ ನರಿ ವಯಾ: 45 ವರ್ಷ ಉದ್ಯೋಗ: ಶೇತ್ಕಿ, ಸಾ॥ರಕ್ಕಸಗಿ. ತಾ॥ಹುನಗುಂದ, ಜಿ॥ಬಾಗಲಕೋಟ. ಇಂದು ಹುನಗುಂದದಲ್ಲಿ ಪ್ರಮಾಣ ಪೂರ್ವಕವಾಗಿ ಮಾಡುವ ಪ್ರಮಾಣ ಪತ್ರವೆನಂದರೆ.

ಸದರ ದಾವಾದಲ್ಲಿ ನಾನು ಪ್ರತಿವಾದಿ ಇದ್ದು, ಸದರ ದಾವಾದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಗೋತ್ತು ಇರುತ್ತದೆ.

ಸದರ ಕೈಪಿಯತ್ತನಲ್ಲಿರುವ ಮಾಹಿತಿ ವ ಮಜಕೂರಗಳನ್ನು ನಾನೆ ಹೇಳಿ ಬರೆಯಿಸಿದ್ದು ಅವುಗಳು ನನ್ನ ಸ್ವಂತ ತಿಳುವಳಿಕೆ ಹಾಗೂ ನಂಬಿಕೆ ಪ್ರಕಾರ ನಿಜವಿರುತ್ತವೆ ಅಂತಾ ಮಾಡಿದ ಪ್ರಮಾಣ ಪೂರ್ವಕ ಪ್ರಮಾಣ ಪತ್ರ.

ಹುನಗುಂದ.

ದಿನಾಂಕ ~~26-02-~~2018. 02.04.18

(signature)

ಪ್ರತಿಜ್ಞಾಧಾರಕನ ಸಹಿ.

ಸದರಿಯವರ ಪರಿಚಯವಿದೆ.

(signature)

(ಕೆ.ಎಂ,ಸಾರಂಗಮಠ)

ವಕೀಲರು ಹುನಗುಂದ.

One (1) correction

Sheristedar,
Civil Judge (Junior Div) &
JMFC. Court Hunagund-587118

Solemnly affirmed before me by
Sri ಬಸವರಾಜ ತಂ ಮಹಾಂತಪ್ಪ ನರಿ
who is identified by Sri ಕೆ.ಎಂ.ಎಸ್.
whom I know personally ಕೆ. ಎಂ. ಸಾರಂಗಮಠ
date 2/4/18

Sheristedar
Civil Judge (Junior Div) &
JMFC. Court Hunagund-587118